DC-351
T.P-2

(1)

51st Year of Publication ★ SATYAVADI Daily, MYSORE 4

Reg No B G 155 ಶ್ರೀ 20-8-1968

ಚುನಾವಣೆಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available
For Permanent Advertisement

ಸ್ಥಾಪಕರು : ಅರಸುನಿವಸ್ತೀದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಸಾಲವೆತ್ತಲು ನಿರಾಕರಣ ತೀರ್ಮಾನ

ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಸ್. ಕೆ. ಇರಾನಿಯವರು, ಶ್ರೀ ಮಾಧವ್ ಶೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೇರಾ ಟಾಕೀಸಿನವರು, ಪದ್ಮಭೂಷಣ ಸೇ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅಹೋಬಿಲ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯಡೊಡನೆ ನೆರವುನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಮಂದಿಸುತ್ತೇನೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ನಿರ್ಣಯ ತಿರಸ್ಕಾರ

ತಮ್ಮ ಮಕ್ಕಳ ವ್ಯಾಪಾರ ಸಂಬಂಧ ಪಟ್ಟಂತೆ ಎರಡು ಸಂದರ್ಭಗಳಲ್ಲಿ ಸಭೆಗೆ ಸತ್ಯಾಂಶ ತಿಳಿಸಲಿಲ್ಲವೆಂಬ ಮತ್ತು ಶ್ರೀಮತಿ ಇಂದಿರಾ ಗಾಂಧಿಯವರು ಅವರ ರಾಜೀನಾಮೆ ಕೇಳುವವರೆಗೆ ವಿಫಲರಾದರೆಂದೂ ಅವನ್ನು ತಿಯನ್ನು ವ್ಯಕ್ತಮಾಡುವ ನಿರ್ಣಯವನ್ನು ಲೋಕಸಭೆ ನಿನ್ನೆ ತಿರಸ್ಕರಿಸಿತು. ಎಸ್ ಎಸ್ ಪಿಯ ಶ್ರೀ ಮಧು ಲಿಮಾಯೆ ನಿರ್ಣಯ ಮಂಡಿಸಿದ್ದರು.

ದೇವರಿಗೆ ಅರ್ಪಣೆ

ಮೈಸೂರು ನರಸಿಂಹರಾಜ ಮೊಹಲ್ಲಾದಲ್ಲಿ ಶ್ರೀ ಸಂಕಟರಹಣಸ್ವಾಮಿ ದೇವಾಲಯದ ಟ್ರಸ್ಟಿನ ಕಲ್ಯಾಣ ಮಂಟಪದ ಅಸ್ತಿಭಾರ ಶಿಲೆ ಸ್ಥಾಪನೆಯ ಬಗ್ಗೆ ಕೈಗಾರಿಕಾ ಮತ್ತು ವಾರ್ತಾ ಮಂತ್ರಿ ಶ್ರೀ ಎಂ. ರಾಜಶೇಖರ ಮೂರ್ತಿಯವರು ನೆರವೇರಿಸಿದರು. ಮೈಸೂರಿನ ಸುಪ್ರಸಿದ್ಧ ಕೈಗಾರಿಕೋದ್ಯಮಿ ಶ್ರೀ ಎಂ. ಬಿ. ಬಸವಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಮುಕ್ಕಳ್ಳಿಲ್ಲದ ದಂಪತಿಗಳಾದ ಶ್ರೀ ಗೋಪಾಲ ಸಿಂಗ್ ಮತ್ತು ಅವರ ಪತ್ನಿ ತಮ್ಮ ರೂ. 30 ಸಾವಿರ ಬೆಲೆಯ ಮನೆಯೂ ಸೇರಿ ತಮ್ಮೆಲ್ಲ ಆಸ್ತಿಯನ್ನು ದೇವರಿಗೆ ಅರ್ಪಿಸಲೂ ಮತ್ತು ಗಂಗೂ ಬಾಯಿ ಎಂಬ ಮುದುಕಿಯು ತನ್ನ ಜೀವಮಾನದ ಉಳಿತಾಯ ಹಣ ರೂ. 10 ಸಾವಿರವನ್ನು ತನ್ನ ಜೀವಮಾನದ ಅನಂತರ ದೇವಸ್ಥಾನಕ್ಕೆ ಅರ್ಪಿಸುವುದಾಗಿ ತಿಳಿಸಿದರು.

ಪ್ರಥಮ ಸ್ಥಾನ

ಮಹಾರಾಷ್ಟ್ರದ ಶ್ರೀ ಜಿ. ವೈ. ಟಾಕೆ ನಾಡೆಯನವರು ಹೆಕ್ಟೇರಿಗೆ 4000.08 ಟನ್ನುಗಳ ಕಬ್ಬು ಬೆಳೆದು ಅಖಿಲ ಭಾರತ ಕಬ್ಬು ಬೆಳೆ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿರುವರು.

ಕೇರಳದ ಪ್ರತಿಭಟನೆ

ತಿರುವೇಂದ್ರಂನಿಂದ ಬಂದ ವಾರ್ತೆ ಈ ರೀತಿ ಇತ್ತೆ. ತನ್ನ ಅನುಮತಿ ಇಲ್ಲದೆ ಮೈಸೂರು ಸರ್ಕಾರವು ಕಪಿನಿ ಪ್ರಾಜೆಕ್ಟನ್ನು ಕೈಗೊಂಡಿರುವ ಕುರಿತು ಕೇರಳ ಸರ್ಕಾರ ತನ್ನ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿ, ಈ ವಿಚಾರವನ್ನು ಮದ್ರಾಸು. ಮೈಸೂರು, ಕೇಂದ್ರದೊಡನೆ ತೆಗೆದುಕೊಳ್ಳುವುದಾಗಿ ತಿಳಿಸಿದೆ.

★

ಹಾರಂಗಿ ಅಣೆಕಟ್ಟಿಗೆ ಪ್ರಧಾನ ಸ್ಥಾನ ಕೊಡಬೇಕೆಂದು ಕೊಡಗಿನ ನಿಯೋಗವೊಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟಿಲರನ್ನು ಭೇಟಿಮಾಡಿ ಮನವಿ ಅರ್ಪಿಸಿತು.

ಅನೈಕ್ಯತೆಯ ಕುರುಹಲ್ಲ

ಹೈದರಾಬಾದು ಪೌರಸಭೆ ಮೈಸೂರು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರಿಗೆ ಅರ್ಪಿಸಿದ ಮಾನಪತ್ರಕ್ಕೆ ಅವರು ಉತ್ತರಕೊಡುತ್ತಾ, ಮೈಸೂರು ಮತ್ತು ಮದರಾಸು ಸರ್ಕಾರಗಳಲ್ಲಿ ಅಭಿಪ್ರಾಯಗಳ ಬಗ್ಗೆ ಆಗುತ್ತಿರುವ ವರದಿಯಿಂದ ಇದು ಅನೈಕ್ಯತೆಯ ಕುರುಹು ಎಂದು ಯಾರೂ ತಿಳಿಯಬಾರದು ಎಂದು ತಿಳಿಸಿದರು. ಗಡಿಗಳು ಒಂದು ರಾಜ್ಯದ ಜನರನ್ನು ಮತ್ತೊಂದು ರಾಜ್ಯದ ಜನರಿಂದ ಪ್ರತ್ಯೇಕಿಸುವ ಗೋಡೆಗಳಾಗಿ ಕಂಡುಬಂದರೆ, ಆ ಗೋಡೆಗಳನ್ನು ಉರುಳಿಸಿ, ಐಕ್ಯತೆಯನ್ನು ದೃಢೀಕರಿಸಲಾಗುವುದು ಎಂದು ತಿಳಿಸಿದರೇ

ಪಾಕ್ ಸಿದ್ಧತೆ

ಭಾರತದ ಮೇಲೆ ಭಾರಿ ಆಕ್ರಮಣಕ್ಕೆ ಸಿದ್ಧಪಡಿಸಿಕೊಳ್ಳುತ್ತಿರುವ ಪಾಕೀಸ್ತಾನದ ವಿರುದ್ಧ ಸೂಕ್ತ ರಕ್ಷಣೆ ಏರ್ಪಾಡುಗಳು ನಡೆಯುತ್ತಿಲ್ಲವೆಂದು, ಪಾಕೀಸ್ತಾನ 64ರಲ್ಲಿದ್ದುದಕ್ಕಿಂತ ಎರಡರಷ್ಟು ಸೇನೆ ಸಿದ್ಧಪಡಿಸಿರುವುದರಿಂದ ಈ ಬಾರಿ ಯುದ್ಧವು ಭೀಕರವೂ ಮತ್ತು ತುಂಬಾ ರಕ್ತಪಾತದಿಂದ ಕೂಡಿರುವುದು ಆಗಿರುವುದೆಂದು ಜನಸಂಘ ನಾಯಕ ಶ್ರೀ ಬಾಲರಾಜ ಮಧೋಕರು ಮದರಾಸಿನಲ್ಲಿ ತಿಳಿಸಿದ್ದಾರೆ.

ನಾಲ್ವರ ಜಲಸಮಾಧಿ

ಕಾಸರಗೋಡಿನ ಪರ್ದಾಲದಿಂದ ಬಂದಿರುವ ವಾರ್ತೆಯ ಪ್ರಕಾರ ಪೆಲಾತಡಿಕದ ಅಡ್ಕಲಸ್ಥಳ ನದಿಯಲ್ಲಿ ಪ್ರಯಾಣ ಹೊಡುತ್ತಿದ್ದ ಒಂದು ಕುಟುಂಬದ ನಾಲ್ವರು ಜಲಸಮಾಧಿ ಆದರು,

ಕಾಮರಾಜರ ಕುರಿತು ದೂಷಣೆ

ತಮಿಳು ನಾಡು ಕಾಂಗ್ರೆಸಿನ ವ್ಯವಸ್ಥೆಯಲ್ಲಿ ಶ್ರೀ ಕಾಮರಾಜರು ಪ್ರವೇಶಿಸಿ, ತಪ್ಪಾದ ತನ್ನ ನಾಯಕತ್ವದಿಂದ ಕಾಂಗ್ರೆಸು ಸಂಸ್ಥೆಯನ್ನು ದುರ್ಬಲ ಮಾಡುತ್ತಿರುವರೆಂದು ಎ ಐ ಸಿ ಸಿ ಸದಸ್ಯ ಶ್ರೀ ಕೆ. ಟಿ. ಕೋಸಲ್ರಾಂ ಮಧುರೆಯಲ್ಲಿ ನಿನ್ನೆ ತಿಳಿಸಿದರು.

ರಾಜ್ಯ ಸರ್ಕಾರದ ಸಾಲ

ಮೈಸೂರು ರಾಜ್ಯ ಸರ್ಕಾರ ಹನ್ನೆರಡು ವರ್ಷಗಳ ಆರು ಕೋಟಿ ರೂಪಾಯಿಗಳ ಸಾಲ ಎತ್ತಲು ನಿರ್ಧರಿಸಿರುವುದೆಂದಾಗಿ ಬೆಂಗಳೂರು ವಾರ್ತೆ ತಿಳಿಸುತ್ತದೆ.

ಈ ಸಾಲಕ್ಕೆ ಮೈಸೂರು ರಾಜ್ಯದ ಅಭಿವೃದ್ಧಿ ಸಾಲ, ಶೇಕಡ ಐದುಮುಕ್ಕಾಲರದು ಎಂದು ಕರೆಯಲ್ಪಾಗಿದೆ,

ಮುಳುಬಾಗಲು ಬಂದ್

ಮೂರು ಅಥವಾ ಸಾಲ್ಕರಷ್ಟು ಕಂದಾಯವನ್ನು ಹೆಚ್ಚಿಸುವ ಪ್ರಯತ್ನವನ್ನು ಪ್ರತಿಭಟನೆ ಮಾಡಲು ನಿನ್ನೆ ಮುಳುಬಾಗಿಲು ಬಂದ್ ಆಚರಿಸಲ್ಪಟ್ಟಿತು.

ಮೂಕತನ ಬಂತು

" ಕಳೆದ ಶನಿವಾರ ವಿದ್ಯಾರ್ಥಿನಿಯೊರ್ವಳನ್ನು ಓರ್ವ ಅಪಹರಿಸಿ ಹೈದರಾಬಾದಿನ ಮತ್ತೊಂದು ಭಾಗಕ್ಕೆ ಜೀಪಿನಲ್ಲಿ ಕರೆದುಕೊಂಡು ಹೋದನು. ಆಕೆಯ ಮಾನ ಭಂಗಕ್ಕೆ ಆತ ಪ್ರಯತ್ನಿಸಿದಾಗ ಆಕೆ ಕೂಗಿಕೊಂಡಳು. ಆಲ್ಲೇ ಹೋಗುತ್ತಿದ್ದವರ ನೋರ್ವ ಸಹಾಯಕ್ಕೆ ಹೋಗಲು ತಿವಿಯಲ್ಪಟ್ಟನು. ಈ ಘಟನೆ ನಡೆದ ನಂತರ ಅವಳು ಮಾತನಾಡದವಳಾಗಿ ಗಲ್ಲಿಗಳಲ್ಲಿ ಓಡಿಬಂದು ಕಡೆಗೆ ಗಾಂಧಿ ಆಸ್ಪತ್ರೆಗೆ ಸೇರಿದಳು. ಇನ್ನೂ ಮಾತುಬಂದಿಲ್ಲ.

ಬೆಸ್ತರ ಜಲಸಮಾಧಿ

ಮೀನು ಹಿಡಿಯುವ ದೋಣಿಯೊಂದು ಮುಳುಗಿ ರಾಮೇಶ್ವರಂನಲ್ಲಿ ಹದಿಮೂರು ಜನ ಜಲಸಮಾಧಿ ಆದರು.

ಗಿರಣಿ ಮೇಲೆ ದಾಳಿ

ನಿನ್ನೆ ಸಂಜೆ ಸುಮಾರು 4-30 ಘಂಟೆ ಸಮಯದಲ್ಲಿ ಹುಬ್ಬಳ್ಳಿಯ ಹಿಟ್ಟಿನ ಗಿರಣಿಯೊಂದರ ಮೇಲೆ ಸುಮಾರು ಇನ್ನೂರು ಜನರ ಬಲವಾದ ಗುಂಪು ದಾಳಿ ಮಾಡಿತ್ತು. ರೂ. 5 ಸಾವಿರ ನಷ್ಟ ಅಂದಾಜಾಗಿದೆ. ● ಕೇಂದ್ರ ರೈಲ್ವೆ ಸಚಿವಾಣಿಕ ದರ ಪುನರ್ವಿಮರ್ಶೆ ಆಗಲಿದೆ.

ಹಿಂದೂಗಳ ಆಚಾರ

ಸಂಗ್ರಾಹಕರು— 'ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಧಾರ್ಮಿಕ ಸಂಸ್ಥೆಗಳು ಈಗ ಮಾಡುತ್ತಿರುವ ಕೆಲಸದೊಂದಿಗೆ ಆಗಾಗ್ಗೆ ತರಬೆತಿಬಿರಗಳನ್ನು ಒಂದೆ ತಿಂಗಳು ಅಥವಾ ಎರಡು ತಿಂಗಳ ಕಾಲವಾದರೂ ನಡೆಸಿ, ಯುವಕರಿಗೆ ಹಿಂದೂಧರ್ಮದ ಬಗ್ಗೆ ತಿಳುವಳಿಕೆ ನೀಡಿ, ಹಿಂದೂ ಆಚಾರಗಳ ತರಬೇತಿ ನೀಡಬಹುದು. ಈಗ ಹೇಶಾವ್ಯಂತ ಗ್ರಾಮಗಳಲ್ಲಿಯೂ ಪಟ್ಟಣಗಳಲ್ಲಿಯೂ ವಿವಿಧ ಧಾರ್ಮಿಕ ಸಂಸ್ಥೆಗಳಿದ್ದು ನಾನಾಬಗೆಯ ಕೆಲಸಗಳನ್ನು ನಡೆಸುತ್ತಿವೆ. ಸಮಾನ ಧ್ಯೇಯವುಳ್ಳಂಥಾ ಸಂಸ್ಥೆಗಳು ವರಸ್ಪರ ಸಂಘಟಿತವಾಗಿ, ಒಂದಕ್ಕೊಂದು ಸಹಕರಿಸಿ ಕೆಲಸಮಾಡುತ್ತಾ ಬಂದಲ್ಲಿ ಮತ್ತಷ್ಟು ಹೆಚ್ಚಿನ ಕೆಲಸವಾಗಬಹುದು.

—

ಸ್ವಾತಂತ್ರ್ಯ ದಿನೋತ್ಸವ

ದಿನಾಂಕ 15–8–68.ರಂದು ಚಾಮರಾಜನಗರ ತಾಲ್ಲೂಕು ಹೊಂಗನೂರು ಹೈಯರ್ ಪ್ರೈಮರಿ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ನಡೆಯಿತು. ರಾಷ್ಟ್ರ ಧ್ವಜಕ್ಕೆ ಪೂಜೆ ಮಾಡುತ್ತಾ ಧ್ವಜಾರೋಹಣ ಆದನಂತರ, ಅಧ್ಯಾಪಕಿ ಶ್ರೀಮತಿ ಇಂದಿರಮ್ಮನವರಿಂದ ದೇವತಾ ಪ್ರಾರ್ಥನೆಯಾಯಿತು. ಮುಖ್ಯೋಪಾಧ್ಯಾಯ ಶ್ರೀ ಹೆಚ್. ಎಸ್. ನಾಗೇಶರಾಯರು ಅಧ್ಯಕ್ಷತೆ ವಹಿಸಲು ಕೋರಿದರು. ಶ್ರೀ ಅನಂತನರಸಿಂಹಯ್ಯಂಗಾರ್ಯರಿಂದ ಅಧ್ಯಕ್ಷ ಭಾಷಣ, ಅಧ್ಯಾಪಕ ಶ್ರೀ ಚನ್ನಬಸಪ್ಪನವರಿಂದ ಹಂದನಾರ್ಪಣೆ ನಡೆಯಿತು. ರಾಷ್ಟ್ರಗೀತೆ ಮತ್ತು ಸಿಹಿ ಹಂಚುವಿಕೆಯೊಡನೆ ಸಮಾರಂಭ ಮುಕ್ತಾಯಗೊಂಡಿತು.

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Quality Printing — Neat Binding

Lakshminarasimha Press

Sivarampet, Mysore

ಆಶೋಕ ಬಿಜಿನೆಸ್‌ಸಿನ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಅಯುರ್ವೇದ ಔಷಧಗಳನ್ನೂ ದೊರೆಯುತ್ತವೆ

ಪುಡ್‌ಲಾಂಡ್ಸ್ ಅಮೋಘ 2ನೇ ವಾರ

— ಮನಮೋಹಕ ಹಿಂದಿ ಚಿತ್ರ —

ಫಜ್ಜ

ಈಸ್ಟ್‌ಮನ್ ಕಲರ್

ಪಾತ್ರ — ಜಿತೇಂದ್ರ, ಭಬಿತಾ, ಕಾಂಚನಾ, ಮುಕ್ರಿ, ಆಗಾ ಮುಂತಾದವರು

ಸಂಗೀತ —

ಲಕ್ಷ್ಮೀಕಾಂತ್ ಪ್ಯಾರೇಲಾಲ್

ಅಪೆರ— ಜನವರಿಯ 7 ನೇ ವಾರ

ಚಿತ್ತಾಕರ್ಷ ಕನ್ನಡ ಚಿತ್ರ

ನಮ್ಮ ಊರು

ಪಾತ್ರ : ಉದಯ ಕುಮಾರ್ ಅಶ್ವತ್ಥ್ ಬಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾತ್ತ ಅನುಗ್ರಹ ಕೃಪೆಯಾಗಿದೆ

ಕನ್ನಡಸಾಹಿತ್ಯದಲ್ಲಿ ಗೋರಕ್ಷಣೆ ಪತ್ರಿಕೆಯೆ, ತಕ್ಕುತಕ್ಕಹಾಗೆ, ಪಶುವೈದ್ಯ, ಎಚ್ಚರಗಳ ವಿಶೇಷ ಪ್ರಚಾರಮಾಸಪತ್ರಿಕೆ ; ವಾರ್ಷಿಕ ಚಂದಾ 50 ಪೈಸೆ

— ಗೋರಕ್ಷಣಾ ವ್ಯವಸ್ಥಾಪಕರು ವಿನಂತಿ —

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾಪಾಯಿದೆ ಕಳದಿಂವವರು ಇವಂಥ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಂಜುಂಡಯ್ಯ, ಶ್ರೀ ಪಿ.ಸಿ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಬಿ. ಬಿ. ಶಾಸ್ತ್ರಿಗಳು, 1030 ಪದ್ಮಾಂಜ್ಯವುರ, ಮೈಸೂರು

ಶ್ರೀ ಅನಂತನಂಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ ಹೊಂಗನೂರು.

ಗೋರಕ್ಷಣಾ ಆಫೀಸು ಸತ್ಯವಾದಿಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ—ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

ಗೋರಕ್ಷಣೆ ದುಷ್ಟ ಸ್ವಾರ್ಥದಿಯಾ ಕಾರ್ಯಗಳು ಹೆಚ್ಚಿ ಜಾಸ್ತಿಗಿ ನಡೆಯಲಿ

Edited, Printed & Published by Dharmapracharo Nirato M. S. Krishna Rao (Proprietor) at the Satyavadi Press Chamarajapuram, Mysoe 4